# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 27

**ಮಾನ್ಯ ಸದಸ್ಯರ ಹೆಸರು** : ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)

**ಉತ್ತರಿಸಬೇಕಾದ ದಿನಾಂಕ** : 05.03.2025

**ಉತ್ತರಿಸಬೇಕಾದ ಸಚಿವರು** : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಪರಿಶಿಷ್ಟ ಜಾತಿಯ ಕೆಲವು ಪಂಗಡದವರು ಮಾಂಸಕ್ಕಾಗಿ ಸಾಕುವ ಪ್ರಾಣಿಗಳ ವಧೆ ಮಾಡಿ ಅವುಗಳ ಮಾಂಸ ಮಾರಾಟ ಮಾಡುವ ಮೂಲಕ ತಮ್ಮ ದೈನಂದಿನ ಜೀವನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ರಾಜ್ಯದಲ್ಲಿ ಈ ರೀತಿಯಲ್ಲಿ ಜೀವನ ಮಾಡುವ ಪರಿಶಿಷ್ಟ ಜಾತಿಯವರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ; ರಾಜ್ಯದಲ್ಲಿ ಇವರ ಜನ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | 2020ನೇ ಸಾಲಿನ ಜಾನುವಾರು ಗಣತಿಯಂತೆ ರಾಜ್ಯದಲ್ಲಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಒಟ್ಟು 3,83,215 ಜನರು ಕುರಿ ಮತ್ತು ಮೇಕೆ ಸಾಕಾಣಿಕೆಯಲ್ಲಿ ತೊಡಗಿರುತ್ತಾರೆ.<br><br>ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಾಂಸಕ್ಕಾಗಿ ಸಾಕು ಪ್ರಾಣಿಗಳ ವಧೆ ಮಾಡಿ ಅವುಗಳ ಮಾಂಸ ಮಾರಾಟ ಮಾಡುವ ಮೂಲಕ ತಮ್ಮ ದೈನಂದಿನ ಜೀವನ ನಡೆಸುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. |
| ಆ. | ಇತ್ತೀಚಿನ ವರ್ಷಗಳವರೆಗೂ ಅಂತರಾಷ್ಟ್ರೀಯ ಕಂಪನಿಗಳಾದ KFC ಸೇರಿದಂತೆ ಇನ್ನಿತರೆ ಸಂಸ್ಥೆಗಳು ಗ್ರಾಹಕರಿಗೆ ಸಿದ್ಧಪಡಿಸಲಾದ ಮಾಂಸಾಹಾರ ಪೂರೈಸುವ ಸಮಯದಲ್ಲಿ ಪರಿಶಿಷ್ಟ ಜಾತಿಯ ಮಾಂಸ ಮಾರಾಟಗಾರರಿಂದ ಮಾಂಸ ಖರೀದಿಸುತ್ತಿದ್ದು, ಇದರಿಂದ ಪರಿಶಿಷ್ಟ ಜಾತಿಯವರು ತಮ್ಮ ದೈನಂದಿನ ಜೀವನ ಸಾಗಿಸುತ್ತಿರುವುದು ಸರ್ಕಾರದ ಗಮಕ್ಕೆ ಬಂದಿದೆಯೇ; ಪ್ರಸ್ತುತ ಈ ಸಂಸ್ಥೆಗಳ 100% ಹಲಾಲ್ ಮಾಂಸವನ್ನೇ ಖರೀದಿಸುತ್ತಿರುವುದರಿಂದ ಪರಿಶಿಷ್ಟ ಜಾತಿಯ ಮಾಂಸ ಮಾರಾಟಗಾರರು ತಮ್ಮ ಉದ್ಯೋಗವನ್ನೇ ಕಳೆದುಕೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರಕಾರದ ನಿಲುವೇನು; | ಅನ್ವಯಿಸುವುದಿಲ್ಲ. |

| | | |
|---|---|---|
| ಇ. | ಅಂತರಾಷ್ಟ್ರೀಯ ಕಂಪನಿಗಳಾದ KFC ಸೇರಿದಂತೆ ಇನ್ನಿತರ ಸಂಸ್ಥೆಗಳು 100% ಹಲಾಲ್ ಮಾಂಸವನ್ನೇ ಖರೀದಿಸುವ ಮೂಲಕ ಪರಿಶಿಷ್ಟ ಜಾತಿಯ ಮಾಂಸ ಮಾರಾಟಗಾರರಿಗೆ ಆರ್ಥಿಕ ಬಹಿಷ್ಕಾರ ವಿಧಿಸಿದಂತಾಗಿದ್ದು, ಅವರುಗಳ ಉದ್ಯೋಗವನ್ನು ಕಸಿದುಕೊಂಡ ಈ ಕಂಪನಿಗಳ ಮೇಲೆ ದಲಿತರ ಜೀವನಕ್ಕೆ ಧಕ್ಕೆಯುಂಟು ಮಾಡಿರುವುದಲ್ಲದೆ ಸಂವಿಧಾನವು ದೇಶದ ಎಲ್ಲಾ ನಾಗರೀಕರಿಗೆ ನೀಡಿದ ಮೂಲಭೂತ ಹಕ್ಕುಗಳಲ್ಲಿ ಒಂದಾದ ಬದುಕುವ ಹಕ್ಕನ್ನೇ ಕಸಿದುಕೊಂಡಂತಾಗಿದ್ದು ಪರಿಶಿಷ್ಟ ಜಾತಿಯವರು ಬದುಕುವ ಹಕ್ಕನ್ನೇ ಕಸಿದುಕೊಂಡಿರುವ ಕುರಿತು (ಅಟ್ರಾಸಿಟಿ) ಪ್ರಕರಣ ದಾಖಲು ಮಾಡುವ ಬಗ್ಗೆ ಸರಕಾರದ ನಿಲುವೇನು? | ಅನ್ವಯಿಸುವುದಿಲ್ಲ. |

**ಸಂಖ್ಯೆ:ಪಸಂಮೀ 25 ಸಲೆವಿ 2025**

2/9

**(ಸಿ. ಪುಟ್ಟರಂಗಶೆಟ್ಟಿ)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**